# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **838** |
| **ಸದಸ್ಯರ ಹೆಸರು** | : | ಶ್ರೀ ಪ್ರತಾಪ್ ಸಿಂಹ ನಾಯಕ್ .ಕೆ (ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 16-12-2024 |
| **ಉತ್ತರಿಸುವ ಸಚಿವರು** | : | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಅರಣ್ಯ ಒತ್ತುವರಿಯನ್ನು ಕೆಲವು ಷರತ್ತುಗಳನ್ನು ವಿಧಿಸಿ, ಸಕ್ರಮಗೊಳಿಸಲು 1996ರಲ್ಲಿ ಕೇಂದ್ರ ಸರ್ಕಾರ ಅನುಮತಿ ನೀಡಿದ ನಂತರ ಆ ಕುರಿತ ಎಷ್ಟು ಪ್ರಕರಣಗಳನ್ನು ಸಕ್ರಮಗೊಳಿಸಲು ಅನುಮತಿ ಕೋರಿ ಸಲ್ಲಿಸಲಾಗಿತ್ತು:</td><td>ದಿನಾಂಕ: 27.04.1978ರ ಪೂರ್ವದ ಅರಣ್ಯ ಅತಿಕ್ರಮಣ ಪ್ರಕರಣಗಳನ್ನುಸಕ್ರಮಗೊಳಿಸಲು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರವು ಈ ಕೆಳಕಂಡಂತೆ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಅನುಮೋದನೆ ನೀಡಿರುತ್ತದೆ.
<table>
<tr><th>ಕ್ರ. ಸಂ</th><th>ವಿವರ</th><th>ಕುಟುಂಬಗಳ ಸಂಖ್ಯೆ</th><th>ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)</th></tr>
<tr><td>1</td><td>ಭಾರತ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ</td><td>21569</td><td>17007.23</td></tr>
<tr><td>2</td><td>ಭಾರತ ಸರ್ಕಾರದಿಂದ ಅನುಮೋದನೆ ಪಡೆದಿರುವುದು</td><td>19348</td><td>14848.83</td></tr>
</table></td></tr>
<tr><td>ಆ)</td><td>ಸಕ್ರಮಗೊಳಿಸಲು ಅನುಮತಿ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಅರ್ಹ ಒತ್ತುವರಿದಾರರ ಎಷ್ಟು ಪ್ರಕರಣಗಳು ಕೈಬಿಟ್ಟುಹೋಗಿದ್ದವು:</td><td>ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.</td></tr>
<tr><td>ಇ)</td><td>ಸಕ್ರಮಗೊಳಿಸಲು ಅನುಮತಿ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಅರ್ಹ ಒತ್ತುವರಿದಾರರ ಪ್ರಕರಣಗಳು ಕೈಬಿಟ್ಟುಹೋಗಿದ್ದಲ್ಲಿ ಅವುಗಳ ಕುರಿತು ಸರ್ಕಾರ ಆನಂತರದಲ್ಲಿ ಏನು ಕ್ರಮ ಕೈಗೊಂಡಿದೆ:</td><td>ಉದ್ಭವಿಸುವುದಿಲ್ಲ.</td></tr>
<tr><td>ಈ)</td><td>ರಾಜ್ಯದಲ್ಲಿ ಎಲ್ಲಾ ಅರ್ಹ ಒತ್ತುವರಿದಾರರ ಪ್ರಕರಣಗಳನ್ನು ಈಗಾಗಲೇ ಸಕ್ರಮಗೊಳಿಸಲಾಗಿದೆಯೇ;</td><td>ಸಕ್ರಮಾತಿಗೊಳಿಸುವ ಪ್ರಕರಣಗಳ ವಿವರ ಈ ಕೆಳಕಂಡಂತಿದೆ:-
<table>
<tr><th>ಕ್ರ. ಸಂ</th><th>ವಿವರ</th><th>ಕುಟುಂಬಗಳ ಸಂಖ್ಯೆ</th><th>ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)</th></tr>
<tr><td>1</td><td>ಜಿಲ್ಲಾಧಿಕಾರಿಗಳಿಂದ ತಾತ್ವಿಕ ಅನುಮೋದನೆ ಗೊಂಡಿರುವುದು</td><td>7828</td><td>5234.10</td></tr>
</table></td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ | | | |
|---|---|---|---|---|---|
| | | 2 | ಜಿಲ್ಲಾಧಿಕಾರಿಗಳಿಂದ ತಿರಸ್ಕೃತಗೊಂಡಿರುವುದು | 5259 | 4735.35 |
| | | 3 | ಜಿಲ್ಲಾಧಿಕಾರಿಗಳಿಂದ ತಾತ್ವಿಕ ಅನುಮೋದನೆಗೊಳ್ಳಲು ಬಾಕಿ ಇರುವುದು | 6261 | 4879.38 |
| | | ಈ ಮೇಲ್ಕಂಡ ಪ್ರಕ್ರಿಯೆ ಕುರಿತು, ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಕ್ರಮ ಕೈಗೊಳ್ಳಲಾಗುತ್ತಿದೆ. ಸಕ್ರಮಾತಿಗೆ ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಅರ್ಹ ಒತ್ತುವರಿದಾರರಿಂದ ಪೂರಕ ದಾಖಲೆಗಳನ್ನು ಪಡೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. | | | |
| ಉ) | ಎಲ್ಲಾ ಅರ್ಹ ಒತ್ತುವರಿದಾರರ ಪ್ರಕರಣಗಳನ್ನು ಇದುವರೆಗೆ ಸಕ್ರಮಗೊಳಿಸದಿದ್ದಲ್ಲಿ ಅದಕ್ಕೆ ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಸಕ್ರಮಗೊಳಿಸಲಾಗುವುದು? | ಅರ್ಹ ಒತ್ತುವರಿದಾರರ ಪ್ರಕರಣಗಳನ್ನು ಸಕ್ರಮಾತಿಗೊಳಿಸಲು ಜಿಲ್ಲಾಧಿಕಾರಿಗಳಿಂದ ಕ್ರಮ ಕೈಗೊಳ್ಳಲಾಗುತ್ತಿದೆ. ಅದಷ್ಟು ಶೀಘ್ರವಾಗಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದೆ. | | | |

**ಸಂಖ್ಯೆ: FEE/168/FGL/2024**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.